ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯದಲ್ಲಿ,
ನ.ರಾ.ಪುರ, ಸಂಚಾರಿ ನ್ಯಾಯಾಲಯ ಕೊಪ್ಪ.

ಎಂ ವಿ ಸಿ ನಂಃ 03/2025
ಪಿ ಡಬ್ಲ್ಯುಃ 2

ಸಾಕ್ಷಿದಾರರ ಹೆಸರು ಃ ಜಗನ್ನಾಥ
ತಂದೆಯ ಹೆಸರು ಃ ಗೋಪಾಲ
ವಯಸ್ಸು ಃ 37 ವರ್ಷ
ಉದ್ಯೋಗ ಃ ಮೊದಲಿಗೆ ಗಾರೆ ಕೆಲಸ
ವಾಸಸ್ಥಳ ಃ ಸೋಪನಕೆರೆ

ದಿನಾಂಕಃ 11.12.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.

ಕಾಲ ವಿಳಂಬ ಮನ್ನಾ ಅರ್ಜಿಯನ್ನು ಕುರಿತು ಅರ್ಜಿದಾರರ ಮುಖ್ಯವಿಚಾರಣೆಃ
ಅರ್ಜಿದಾರರ ಪರ ಶ್ರೀ ಹೆಚ್ ಹೆಚ್ ಕೆ ವಕೀಲರಿಂದಃ

ಈಗ್ಗೆ 2 ವರ್ಷದ ಹಿಂದೆ ನನಗೆ ಅಪಘಾತ ಆಗಿರುತ್ತದೆ. ಅಪಘಾತದ ನಂತರ ನಾನು ವೆನ್ ಲಾಕ್ ಆಸ್ಪತ್ರೆ ಮಂಗಳೂರಿನಲ್ಲಿ ಒಂದು ತಿಂಗಳುಗಳ ಕಾಲ ಚಿಕಿತ್ಸೆ ಪಡೆದುಕೊಂಡಿದ್ದು ನಂತರ ನಾನು ದಾಖಲೆಗಳನ್ನು ನೀಡುವಂತೆ ಪೊಲೀಸ್ ಠಾಣೆ, ನ್ಯಾಯಾಲಯ ಹಾಗೂ ಆಸ್ಪತ್ರೆಗೆ ಅರ್ಜಿ ಕೊಟ್ಟಿದ್ದೆ. ನನಗೆಅಪಘಾತದಿಂದಾಗಿ ಪರಿಹಾರ ಪಡೆಯುವ ಬಗ್ಗೆ ಹಾಗೂ ದಾಖಲಾತಿಗಳನ್ನು ಜೋಡಿಸುವ ಬಗ್ಗೆ ನನಗೆ ಮಾಹಿತಿ ಇರದ ಕಾರಣ ಸಕಾಲದಲ್ಲಿ ನಮ್ಮ ವಕೀಲರಿಗೆ ಈ ಅರ್ಜಿ ಸಲ್ಲಿಸಲು ಹೇಳಿರುವುದಿಲ್ಲ ಹಾಗೂ ನನಗೆ ಉಂಟಾದ ಗಾಯಗಳು ತೀವ್ರ ಸ್ವರೂಪದ್ದಾಗಿದ್ದು ನನಗೆ ದಾಖಲೆ ತೆಗೆಸುವ ಸಂಬಂಧ ಕಛೇರಿಗೆ ಹೋಗುವ ಸ್ಥಿತಿಯಲ್ಲಿ ಇರದೇ ಇರುವ ಕಾರಣ ಈ ಅರ್ಜಿಯನ್ನು ನಾನು ವಿಳಂಬವಾಗಿ ಸಲ್ಲಿಸಿದ್ದು ಸದರಿ ಕಾಲ ವಿಳಂಬ ಅರ್ಜಿಯನ್ನು ಮನ್ನಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಜೆ ಪಿ ಎಲ್ ಪರವಾಗಿ ಶ್ರೀಮತಿ ಎಸ್ ಬಿ ವಕೀಲರಿಂದಃ

ನಾನು ಅಪಘಾತ ಆದ ನಂತರ ಮಂಗಳೂರ್ ವೆನ್ ಲಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯ ಆಸ್ಪತ್ರೆ ಮತ್ತು ಪೊಲೀಸ್ ಠಾಣೆಗೆ ದಾಖಲೆಗಳನ್ನು ತೆಗೆಸುವಂತೆ ಅರ್ಜಿ ಕೊಟ್ಟಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಅಪಘಾತದಿಂದ ಪರಿಹಾರ ಪಡೆಯುವ ಬಗ್ಗೆ ಮತ್ತು ಅರ್ಜಿ ಸಲ್ಲಿಸುವ ಬಗ್ಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. ನನಗೆ ಅಪಘಾತದಿಂದ ತೀವ್ರ ಸ್ವರೂಪದ ಗಾಯಗಳು ಉಂಟಾದ ಕಾರಣ ನಾನು ಸಂಬಂಧಿಸಿದ ಕಛೇರಿಗೆ ಹೋಗಿ ದಾಖಲೆಗಳನ್ನು ಪಡೆಯಲು ಆಗಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕಾಲ ವಿಳಂಬ ಮನ್ನಾ ಮಾಡುವ ಬಗ್ಗೆ ಯಾವುದೇ ಸಕಾರಣಗಳನ್ನು ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿ: